APRIL 06, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಭಾರತದ ಸಾಗರ ತಟಗಳ ಸುರಕ್ಷತೆ ಹಾಗೂ ಮಿತ್ರ ರಾಷ್ಟ್ರಗಳ ಹಿತ ರಕ್ಷಣೆಗೆ, ನೌಕಾ ಪಡೆ ಸನ್ನದ್ಧ – ಕೇಂದ್ರ ಸಚಿವ ರಾಜನಾಥ ಸಿಂಗ್.**
- **ರಾಜ್ಯದ, ಏಕಲವ್ಯ, ಮಾದರಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ, 10ನೇ ತರಗತಿ ಹಾಗೂ ಪಿ.ಯು.ಸಿ. ಪರೀಕ್ಷೆಗಳಲ್ಲಿ, ರಾಷ್ಟ್ರ ಮಟ್ಟದಲ್ಲಿ, ಅಗ್ರ ಸ್ಥಾನ.**
- **ರಾಷ್ಟ್ರೀಯ ಕಡಲ ದಿನ; ಕರಾವಳಿ ಜಿಲ್ಲೆಗಳಲ್ಲಿ ವಿಶಿಷ್ಟ ಆಚರಣೆ.**
- **ಇಂದು ಶ್ರೀ ರಾಮ ನವಮಿ; ನಾಡಿನಾದ್ಯಂತ ಶ್ರೀ ರಾಮ ಮಂದಿರಗಳಲ್ಲಿ, ಸಂಭ್ರಮದ ತೊಟ್ಟಿಲೋತ್ಸವ.**

<><><>

**ಈಗ ವಾರ್ತೆಗಳ ವಿವರ**

<><><>

**ಭಾರತದ ಸಾಗರ ತಟಗಳಲ್ಲಿ, ಸುರಕ್ಷತೆ ಜೊತೆಗೆ, ಮಿತ್ರ ರಾಷ್ಟ್ರಗಳ ಹಿತ ರಕ್ಷಣೆಗೆ, ಭಾರತೀಯ ನೌಕಾ ದಳ ಸದೈವ ಸರ್ವ ಸನ್ನದ್ಧ ಸ್ಥಿತಿಯಲ್ಲಿದೆ ಎಂದು, ಕೇಂದ್ರ ರಕ್ಷಣಾ ಖಾತೆ ಸಚಿವ, ರಾಜನಾಥ್ ಸಿಂಗ್ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರದ ಐ.ಎನ್.ಎಸ್. ನೌಕಾ ನೆಲೆಯಲ್ಲಿ, 'ಇಂಡಿಯನ್ ಓಸಿಯನ್ ಶಿಪ್ ಸಾಗರ' ಕಾರ್ಯಾಚರಣೆಗೆ, ಚಾಲನೆ ನೀಡಿ, ಅವರು ಮಾತನಾಡಿದರು. ಹಿಂದು ಮಹಾ ಸಾಗರದಲ್ಲಿ, ಶಾಂತಿ ಕಾಪಾಡುವಲ್ಲಿ, ಭಾರತೀಯ ನೌಕಾ ಪಡೆ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಎಂದು, ಅವರು ಶ್ಲಾಘಿಸಿದರು.**

<><><>

**ಇದೇ ವೇಳೆ, ಸೀ ಬರ್ಡ್ ಯೋಜನಾ ವ್ಯಾಪ್ತಿಯ, ಮೂಲ ಸೌಕರ್ಯಗಳ ಅಭಿವೃದ್ಧಿಗೆ, 2 ಸಾವಿರ ಕೋಟಿ ರೂಪಾಯಿ ವೆಚ್ಚದ, ಕಾಮಗಾರಿಗಳಿಗೆ, ಚಾಲನೆ ನೀಡಿ, ಕಾಮಗಾರಿಯ ಎಲ್ಲ ಕಚ್ಚಾ ಸರಕು, ಆತ್ಮ ನಿರ್ಭರ ಭಾರತ ಯೋಜನೆ ಅಡಿ, ಉತ್ಪಾದಿಸಲಾಗಿದೆ ಎಂದು, ರಾಜನಾಥ್ ಸಿಂಗ್ ತಿಳಿಸಿದರು.**

<><><>

ರಾಜ್ಯದ ಏಕಲವ್ಯ ಮಾದರಿ ವಸತಿ ಶಾಲೆಗಳ ವಿದ್ಯಾರ್ಥಿಗಳು, 2024ರ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ. ಪರೀಕ್ಷೆಗಳಲ್ಲಿ, ರಾಷ್ಟ್ರ ಮಟ್ಟದಲ್ಲಿ ಅಗ್ರ ಸ್ಥಾನ ಗಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಮ್ಮ ಕಾವೇರಿ ನಿವಾಸದಲ್ಲಿ, ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.

<><><>

ಚಿತ್ರದುರ್ಗದ ಸಂಜೀವ್ ಮುತ್ತಯ್ಯ, ಎಸ್.ಎಸ್.ಎಲ್.ಸಿ.ಯಲ್ಲಿ ಶೇಕಡ 96 ದಶಾಂಶ 8 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದು, 2 ಲಕ್ಷ ರೂಪಾಯಿ ಬಹುಮಾನ, ರಾಯಚೂರಿನ ವೀರೇಶ್, ಪಿ.ಯು.ಸಿ. ವಾಣಿಜ್ಯ ವಿಭಾಗದಲ್ಲಿ, ಶೇಕಡ 95 ದಶಾಂಶ 1-6 ಅಂಕ ಗಳಿಸಿ, ಪ್ರಥಮ ಸ್ಥಾನ ಗಳಿಸಿದ್ದು, 2 ಲಕ್ಷ ರೂಪಾಯಿ ಹಾಗೂ, ಬೆಳಗಾವಿಯ ಲೋಹಿತ್ ಶಿನೋಬಿ, ವಿಜ್ಞಾನ ವಿಭಾಗದಲ್ಲಿ, ಶೇಕಡ 95 ಅಂಕ ಪಡೆದು, ತೃತೀಯ ಸ್ಥಾನ ಗಳಿಸಿದ್ದು, ಅವರಿಗೆ 1 ಲಕ್ಷ ರೂಪಾಯಿ ಬಹುಮಾನ ನೀಡಿ, ಮುಖ್ಯಮಂತ್ರಿ ಗೌರವಿಸಿದರು.

<><><>

ಶರಾವತಿ ಹಿನ್ನೀರು ಸಂತ್ರಸ್ಥರ, ನೆಮ್ಮದಿಯ ಬದುಕಿಗೆ, ಸರ್ಕಾರ ಬದ್ಧವಾಗಿದೆ ಎಂದು, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಭರವಸೆ ನೀಡಿದ್ದಾರೆ. ಶಿವಮೊಗ್ಗದಲ್ಲಿ ಮಾತನಾಡಿದ ಸಚಿವರು, ನ್ಯಾಯಾಲಯದ ನಿರ್ದೇಶನದಂತೆ, ಶರಾವತಿ ಮುಳುಗಡೆ ಪ್ರದೇಶದ ಸಮೀಕ್ಷಾ ಕಾರ್ಯ ಸದ್ಯದಲ್ಲೇ ನಡೆಯಲಿದೆ. ಅತ್ಯಾಧುನಿಕ ಪರಿಕರಗಳನ್ನು ಒದಗಿಸಿ, ಅಗತ್ಯ ಸಿಬ್ಬಂದಿ ನಿಯೋಜಿಸಲಾಗಿದೆ. ಸಂತ್ರಸ್ಥರು ಸಮೀಕ್ಷಾ ಕಾರ್ಯಕ್ಕೆ ಸಹಕರಿಸುವಂತೆ, ಅವರು ಮಾಡಿದರು. ಈ ಸಮೀಕ್ಷೆ ದೇಶದ ಅನೇಕ ಸಂತ್ರಸ್ಥ ಭೂ ಪ್ರದೇಶಗಳಿಗೆ, ಮಾದರಿಯಾಗಿ ಉಳಿಯಲಿದೆ ಎಂದರು.

<><><>

ರಾಷ್ಟ್ರೀಯ ಕಡಲ ದಿನವನ್ನು ಕರಾವಳಿ ಜಿಲ್ಲೆಗಳಲ್ಲಿ ವಿಶೇಷವಾಗಿ ಆಚರಿಸಲಾಯಿತು. ದೇಶದ ಹಣಕಾಸು, ತಟ ರಕ್ಷಣೆ ಮತ್ತು ವ್ಯಾಪಾರ, ವಹಿವಾಟಿನಲ್ಲಿ, ಕಡಲ ಉದ್ಯಮ ವಹಿಸುವ ಪಾತ್ರವನ್ನು, ಗುರುತಿಸಿ ಗೌರವಿಸಲು, ಪ್ರತಿ ವರ್ಷ ಏಪ್ರಿಲ್ 5 ರಂದು, ರಾಷ್ಟ್ರೀಯ ಕಡಲ ದಿನ ಆಚರಿಸಲಾಗುತ್ತದೆ. ಸಮುದ್ರದ ತೀಕ್ಷ್ಣ ಹಾಗೂ ಸವಾಲಿನ ವಾತಾವರಣದಲ್ಲಿ, ದೀರ್ಘಕಾಲ ಇದ್ದು, ಹೋರಾಡುವವರಿಗೆ ಕೃತಜ್ಞತೆ ವ್ಯಕ್ತಪಡಿಸುವ ದಿನವೂ ಹೌದು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ಭಾರತದ ಶ್ರೀಮಂತ ಕಡಲ ಇತಿಹಾಸ ಮತ್ತು ರಾಷ್ಟ್ರ ನಿರ್ಮಾಣದಲ್ಲಿ, ವಹಿಸಿರುವ ಪಾತ್ರವನ್ನು ಸ್ಮರಿಸಿದ್ದಾರೆ.

<><><>

ತಮ್ಮ ಜೀವನದ ಸಾರ್ಥಕ ಐದು ದಶಕಗಳನ್ನು, ಸಾಗರಜೀವಗಳ ಅಧ್ಯಯನಕ್ಕೆ ಮುಡಿಪಿಟ್ಟ, ಅಂತಾರಾಷ್ಟ್ರೀಯ ಖ್ಯಾತಿಯ ಕಡಲ ಜೀವಶಾಸ್ತ್ರಜ್ಞ, ಉತ್ತರಕನ್ನಡ ಜಿಲ್ಲೆ, ಕುಮಟಾದ ಪ್ರೊಫೆಸರ್ ವಿ.ಎನ್. ನಾಯಕ್, ಪ್ರದೇಶ ಸಮಾಚಾರಕ್ಕಾಗಿ, ಕಡಲಿನ ಮಹತ್ವ ವಿವರಿಸಿದ್ದಾರೆ.

<><><>

ಪ್ರೊಫೆಸರ್ ವಿ.ಎನ್. ನಾಯಕ್ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಇಂದು ಚಾಂದ್ರ ಶ್ರೀ ರಾಮ ನವಮಿ. ವಸಂತ ಕಾಲದ, ಚೈತ್ರ ನವರಾತ್ರಿ ಹಬ್ಬದ ಭಾಗ. ನಾಡಿನಾದ್ಯಂತ ಶ್ರೀ ರಾಮ ಮಂದಿರಗಳನ್ನು, ಪುಷ್ಪ ಹಾಗೂ ದೀಪಗಳಿಂದ ಸುಂದರವಾಗಿ ಅಲಂಕರಿಸಿ, ತಳಿರು, ತೋರಣಗಳಿಂದ ಸಿಂಗರಿಸಲಾಗಿದೆ.

<><><>

ಶ್ರೀ ರಾಮ ಜನ್ಮ ಭೂಮಿ ಅಯೋಧ್ಯೆಯಲ್ಲಿ, ರಾಮಲಲ್ಲಾ ಸೇರಿದಂತೆ, ನಾಡಿನೆಲ್ಲೆಡೆ ಶ್ರೀ ರಾಮ ಮಂದಿರಗಳಲ್ಲಿ, ಬಾಲ ರಾಮನ ತೊಟ್ಟಿಲೋತ್ಸವ ಈ ಬೆಳಗ್ಗೆ ನೆರವೇರಿದೆ.

<><><>

ಶ್ರದ್ಧಾ, ಭಕ್ತಿಯಿಂದ ಎಲ್ಲ ಭಕ್ತಾದಿಗಳಿಗೆ, ಕೋಸಂಬರಿ ಹಾಗೂ ಪಾನಕ ಪ್ರಸಾದ ರೂಪದಲ್ಲಿ, ವಿತರಿಸಲಾಗುತ್ತಿದೆ.

<><><>

ಸದಾಚಾರ, ಉತ್ತಮ ನಡವಳಿಕೆ ಮತ್ತು ಸದ್ಗುಣಗಳ ಪ್ರತಿಮಾ ಮೂರ್ತಿ, ಮರ್ಯಾದಾ ಪುರುಷೋತ್ತಮ, ಶ್ರೀ ರಾಮನ ರಥೋತ್ಸವ ಹಲವೆಡೆ ಇಂದು, ಸಂಭ್ರಮದಿಂದ ಜರುಗಲಿದೆ. ಭಜನೆ, ಕೀರ್ತನೆ, ಪಾರಾಯಣ ಎಲ್ಲೆಡೆ ಆಯೋಜಿತವಾಗಿವೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನಾಡಿನ ಜನತೆಗೆ, ಶ್ರೀ ರಾಮ ನವಮಿಯ ಶುಭಾಶಯ ಕೋರಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಶ್ರೀ ರಾಮ ನವಮಿ ಅಂಗವಾಗಿ, ತಮಿಳುನಾಡಿನ ಪಂಬನ್‌ನಲ್ಲಿ, ದೇಶದ ಮೊದಲ ಲಂಬ ಲಿಫ್ಟ್ ಸಮುದ್ರ ಸೇತುವೆಯನ್ನು, ಉದ್ಘಾಟಿಸಲಿದ್ದಾರೆ. ಮಧ್ಯಾಹ್ನ 12.45ಕ್ಕೆ ರಾಮೇಶ್ವರಂನ ರಾಮನಾಥ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಲಿದ್ದಾರೆ. ಮಧ್ಯಾಹ್ನ 1:30ಕ್ಕೆ ರಾಮೇಶ್ವರಂನಲ್ಲಿ ಅವರು ಭಾಷಣ ಮಾಡಲಿದ್ದಾರೆ.

<><><>

ಆಕಾಶವಾಣಿಯ ನಿವೃತ್ತ ಸುದ್ದಿ ಸಂಪಾದಕಿ, ನಾಗಮಣಿ ಎಸ್. ರಾವ್ ಅವರ ಆತ್ಮ ಕಥನ, 'ಸುದ್ದಿಸಂಗಾತಿಯ ಸ್ವಗತ', ಇಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಎನ್.ಆರ್. ಕಾಲೋನಿಯ, ಬಿ.ಎಂ.ಶ್ರೀಕಂಠಯ್ಯ ಪ್ರತಿಷ್ಠಾನದ ಸಭಾಂಗಣದಲ್ಲಿ, ನಾಡೋಜ ಹಂ.ಪ. ನಾಗರಾಜಯ್ಯ ಅವರಿಂದ, ಬಿಡುಗಡೆಯಾಗಲಿದೆ. ನಾಗಮಣಿ ಅವರ, ಮಾಧ್ಯಮ ರಂಗದ ದಶಕಗಳ ಅನುಭವವನ್ನು, ಮಾಲತಿ ಭಟ್ ದಾಖಲಿಸಿದ್ದಾರೆ. ಆರ್. ಪೂರ್ಣಿಮಾ ಅವರು, 'ವಿಕಾಸ ಪ್ರಕಾಶನ' ದಿಂದ ಈ ಕೃತಿ ಪ್ರಕಟಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಹಿರಿಯ ಪತ್ರಕರ್ತೆ, ನಾಗಮಣಿ ಎಸ್.ರಾವ್.

<><><>

ನಾಗಮಣಿ ಎಸ್. ರಾವ್ ಧ್ವನಿ 40 ಸೆಕೆಂದುಗಳು

<><><>

ರಾಜ್ಯದಲ್ಲಿ ತಾಯಂದಿರ ಮರಣದ ಕುರಿತು, ವಿಶ್ಲೇ ’ಣಾ ವರದಿಯನ್ನು, ತಜ್ಞರ ಸಮಿತಿ ಸಲ್ಲಿಸಿದ್ದು, ವರದಿಯಲ್ಲಿ ಶೇಕಡ 70ಕ್ಕಿಂತ ಹೆಚ್ಚು ತಾಯಂದಿರ ಸಾವುಗಳನ್ನು ತಡೆಯಬಹುದಿತ್ತು ಎಂದಿದ್ದಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ್, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವುದು, ತಮ್ಮ ಗುರಿಯಾಗಿದೆ ಎಂದು, ಸಚಿವರು ಹೇಳಿದ್ದಾರೆ.

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ, ರಾಜ್ಯದೆಲ್ಲೆಡೆ ಇತ್ತೀಚಿನ ದಿನಗಳಲ್ಲಿ ಬಾಣಂತಿಯರು ಮತ್ತು ನವಜಾತ ಶಿಶುಗಳ ಮರಣ ಹೆಚ್ಚಿದೆ. ಇದಕ್ಕೆ ರಾಜ್ಯ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು, ದೂರಿದ್ದಾರೆ.

<><><>

ಬಿಸಿಲಿನ ತಾಪಮಾನ ಮತ್ತು ಪ್ರಖರತೆ ಏರುಗತಿಯಲ್ಲಿದ್ದು, ಅಲ್ಲಲ್ಲಿ ಬಿಸಿ ಗಾಳಿ ಸಹ ಬೀಸುತ್ತಿರುವ ಹಿನ್ನೆಲೆ, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ, ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ಕೆಲಸ ನಿರ್ವಹಿಸುತ್ತಿರುವ ಕೂಲಿ ಕಾರ್ಮಿಕರಿಗೆ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ, ಕೆಲಸದ ಪ್ರಮಾಣದಲ್ಲಿ, ಶೇಕಡ 30 ರ ಷ್ಟ ರಿಯಾಯಿತಿ ಪ್ರಕಟಿಸಲಾಗಿದೆ.

<><><>

‘ಆಟದ ಮೈದಾನವನ್ನು ಸಮತಟ್ಟು ಮಾಡುವುದು: ಸಾಮಾಜಿಕ ಸೇರ್ಪಡೆಗಾಗಿ ಕ್ರೀಡೆ’ – ಅಂತಾರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಧ್ಯೇಯವಾಗಿದೆ. ಕ್ರೀಡೆ ಹಾಗೂ ಕ್ರೀಡಾ ಮನೋಭಾವದ ಶಕ್ತಿಯನ್ನು ಗುರುತಿಸಿ, ಸಕಾರಾತ್ಮಕ ಬದಲಾವಣೆ ಪೋಷಿಸಲು, ಅಡೆತಡೆಗಳನ್ನು ನಿವಾರಿಸಿ, ಗಡಿಗಳನ್ನು ಮೀರಲು, ಅಂತಾರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಮತ್ತು ಶಾಂತಿಗಾಗಿ, ಕ್ರೀಡಾ ದಿನವನ್ನು ಇಂದು ಆಚರಿಸಲಾಗುತ್ತಿದೆ.

<><><>

ಅಹಿಂಸೆಯ ಸಾಕಾರ ಮೂರ್ತಿ, 24ನೇ ತೀರ್ಥಂಕರರಾದ, ಭಗವಾನ್ ಮಹಾವೀರರ, ಜನ ಕಲ್ಯಾಣ ಜಯಂತಿ ಮಹೋತ್ಸವದ ಅಂಗವಾಗಿ, ಇಂದಿನಿಂದ 6 ದಿನಗಳ ಕಾಲ, ಜೈನ ಸಮಾಜ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಿದೆ.

<><><>

ಮಾಜಿ ಪ್ರಧಾನಮಂತ್ರಿ, ಬಾಬು ಜಗಜೀವನ ರಾಮ್ ಅವರ, 118ನೇ ಜಯಂತಿ ಹಿನ್ನೆಲೆ, ಗಣ್ಯರು ಅವರ ಸ್ಮೃತಿಗೆ ಶ್ರದ್ಧಾಂಜಲಿ ಅರ್ಪಿಸಿದರು.

<><><>

ಬೆಂಗಳೂರಿನ, ವಿಧಾನಸೌಧದ ಎದುರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಾಧಕರಿಗೆ ಜಗಜೀವನ್ ರಾಮ್ ಪ್ರಶಸ್ತಿ ನೀಡಿ, ಗೌರವಿಸಿದರು.

<><><>

ತುಮಕೂರಿನ ಯಡೆಯೂರು ಶ್ರೀ ಸಿದ್ಧಲಿಂಗೇಶ್ವರ ಪುಣ್ಯ ಕ್ಷೇತ್ರದಲ್ಲಿ, ಭಕ್ತಾದಿಗಳ ಹರ್ಷೋದ್ಗಾರದ ಮಧ್ಯೆ, ಮಹಾ ರಥೋತ್ಸವ ಜರುಗಿತು.

<><><>

ಮಂಡ್ಯದ ಮೇಲುಕೋಟೆ ಶ್ರೀ ಚಲುವ ನಾರಾಯಣ ಸ್ವಾಮಿ, ವೈರಮುಡಿ ಉತ್ಸವ ನಾಳೆ ಸೋಮವಾರ, ವಿಜೃಂಭಣೆಯಿಂದ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಭಾರತದ ಸಾಗರ ತಟಗಳ ಸುರಕ್ಷತೆ ಹಾಗೂ ಮಿತ್ರ ರಾಷ್ಟ್ರಗಳ ಹಿತ ರಕ್ಷಣೆಗೆ, ನೌಕಾ ಪಡೆ ಸನ್ನದ್ಧ – ಕೇಂದ್ರ ಸಚಿವ ರಾಜನಾಥ ಸಿಂಗ್.
- ರಾಜ್ಯದ, ಏಕಲವ್ಯ ಮಾದರಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ, 10ನೇ ತರಗತಿ ಹಾಗೂ ಪಿ.ಯು.ಸಿ. ಪರೀಕ್ಷೆಗಳಲ್ಲಿ, ರಾಷ್ಟ್ರ ಮಟ್ಟದಲ್ಲಿ, ಅಗ್ರ ಸ್ಥಾನ.
- ರಾಷ್ಟ್ರೀಯ ಕಡಲ ದಿನ; ಕರಾವಳಿ ಜಿಲ್ಲೆಗಳಲ್ಲಿ ವಿಶಿಷ್ಟ ಆಚರಣೆ.
- ಇಂದು ಶ್ರೀ ರಾಮ ನವಮಿ; ನಾಡಿನಾದ್ಯಂತ ಶ್ರೀ ರಾಮ ಮಂದಿರಗಳಲ್ಲಿ, ಸಂಭ್ರಮದ ತೊಟ್ಟಿಲೋತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>